38	ಬೇವಿನಹಳ್ಳಿ ಕೆರೆ	164.58	20.08	1000	ಗುರುಸ್ವಾಮಿ ಬಿನ್ ರಂಗಪ್ಪ ಯಲಿಯೂರು
39	ಮೇಲ್ಕುಂಟೆ ಕೆರೆ	58.64	29.49	1000	ಅಖಿಲಾಬಾನು ಕೋಂ ಸೈಯದ್ ಹುಸೇನ್, ಶಿರಾ
40	ನೇಜಂತಿ ಕೆರೆ	–	–	3150	ಈಶ್ವರಿ ಕೆರೆ ನಿರ್ವಹಣಾ ಸಂಘ (ರಿ) ನೇಜಂತಿ
41	ಭೂವನಹಳ್ಳಿ ಕೆರೆ	–	–	1200	ಆರ್.ಪ್ರಕಾಶ್ ಬಿನ್ ರಂಗಸ್ವಾಮಿ, ಸೋರೇಕುಂಟೆ

2008–09ನೇ ಸಾಲಿನಲ್ಲಿ ಸಿರಾ ತಾಲೂಕಿನಲ್ಲಿ ವಿಲೇವಾರಿಯಾಗದೇ ಇರುವ ಕೆರೆಗಳ ವಿವರಗಳು

ಕ್ರ.ಸಂ	ಕೆರೆಯ ಹೆಸರು	ಜಲ ವಿಸ್ತೀರ್ಣ	ಅಚ್ಚುಕಟ್ಟು
1	ಮೆಲ್ಕುಂಟೆ ಜೋಡಿ ಕೆರೆ	48.00	82.30
2	ಮದಲೂರು ಚಿಕ್ಕಕೆರೆ	71.20	75.77
3	ಕೊಟ್ಟಕೆರೆ	108.00	84.42
4	ಗೊಮ್ಮನಹಳ್ಳಿ ವೀರಾಪುರ ಕೆರೆ	40.40	67.98
5	ಚಿಕ್ಕಬಾಣಕೆರೆ ಕೆರೆ	159.60	52.79
6	ಅಗ್ರಹಾರ ಸಣ್ಣಕೆರೆ (ಹಂದಿಕುಮಟೆ)	45.20	46.01
7	ಎಂಜಲಗೆರೆ ದೊಡ್ಡಕೆರೆ	40.40	40.64
8	ಕಾಮಗೊಂಡನಹಳ್ಳಿ ಕೆರೆ ದೊಡ್ಡಕೆರೆ	28.60	61.23
9	ಬೇವಿನಹಳ್ಳಿ ಹೊಸಕೆರೆ	54.94	164.58
10	ಬರಗೂರು ಕೆರೆ	115.20	104.80
11	ಬ್ರಹ್ಮಸಂದ್ರ(ಚೆಂಗಾವರ)ಕೆರೆ	97.76	108.32
12	ಕಗ್ಗಲಡು ಕೆರೆ	64.60	68.67
13	ಹಂದಿಕುಂಟೆ ಕೆರೆ	16.00	99.20

86 ಶ್ರೀ ಜಯಚಂದ್ರ ಟಿ.ಬಿ(ಶಿರಾ)
ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು)

ಅ) ಕರ್ನಾಟಕ ಪ್ರವಾಸೋದ್ಯಮ ಇಲಾಖೆ 2008–09ನೆ ಸಾಲಿನಲ್ಲಿ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಕೈಗೊಂಡ ಯೋಜನೆಗಳು ಯಾವುವು; ಅವುಗಳಿಗೆ ವೆಚ್ಚ ಮಾಡಿರುವ ಹಣವೆಷ್ಟು (ಸಂಪೂರ್ಣ ವಿವರ ನೀಡುವುದು);

2008–09ನೇ ಸಾಲಿನಲ್ಲಿ ಇಲಾಖೆಯು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ವೆಚ್ಚ ಮಾಡಿದ ವಿವರಗಳು ಈ ಕೆಳಕಂಡಂತಿವೆ.

1. ಪ್ರವಾಸೋದ್ಯಮ ಪ್ರಚಾರ/ಜಾಹೀರಾತು/ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರವಾಸಿ ಮೇಳಗಳಲ್ಲಿ ಭಾಗವಹಿಸುವಿಕೆ ಇತ್ಯಾದಿ ಯೋಜನೆಗಳಿಗೆ ರೂ.1300.00 ಲಕ್ಷಗಳನ್ನು ಒದಗಿಸಲಾಗಿದ್ದು, ಇದರಲ್ಲಿ ಇಲ್ಲಿಯವರೆಗೆ ರು.1255.41 ಲಕ್ಷಗಳನ್ನು ವೆಚ್ಚಮಾಡಲಾಗಿದೆ.

2. ಪ್ರವಾಸೋದ್ಯಮ ಮೂಲಸೌಕರ್ಯಗಳ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ರಾಜ್ಯದ ವಿವಿಧ ಪ್ರವಾಸಿ ಸ್ಥಳಗಳಲ್ಲಿ ವಸತಿಗಳು/ಶೌಚಾಲಯಗಳು/ಯಾತ್ರಿ ನಿವಾಸಗಳು ಇತ್ಯಾದಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ರೂ.2662.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು ಈ ಅನುದಾನದಲ್ಲಿ 77 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಈವರೆಗೆ ರೂ.2224.00 ಲಕ್ಷಗಳು ವೆಚ್ಚವಾಗಿರುತ್ತವೆ.

3. ಕೇಂದ್ರ ಧನಸಹಾಯದ ಅಡಿಯಲ್ಲಿ ಕಲ್ಪಿಸಲಾಗುವ ಪ್ರವಾಸಿ ಸೌಲಭ್ಯಗಳಿಗಾಗಿ ಈ ಸಾಲಿನಲ್ಲಿ ರೂ.1000.00 ಲಕ್ಷಗಳನ್ನು ಒದಗಿಸಲಾಗಿದ್ದು ಈ ಅನುದಾನದ ಪೈಕಿ ಈವರೆಗೆ 10 ಯೋಜನೆಗಳಿಗೆ ರೂ.9790.51 ಲಕ್ಷಗಳನ್ನು ವೆಚ್ಚಮಾಡಲಾಗಿದೆ.

4. ಜಿಲ್ಲಾಮಟ್ಟದಲ್ಲಿ ಪ್ರವಾಸಿ ಉತ್ಸವಗಳ ಆಚರಣೆಗಾಗಿ ರೂ.30.00 ಲಕ್ಷಗಳನ್ನು ಒದಗಿಸಲಾಗಿದ್ದು, ಈವರೆಗೆ 16 ಉತ್ಸವಗಳಿಗಾಗಿ ರು.26.53 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಆ) ಶಿರಾ ತಾಲೂಕಿನಲ್ಲಿ ತೆಗೆದುಕೊಂಡಿರುವ ಯೋಜನೆಗಳು ಯಾವುವು: ಈ ಯೋಜನೆಗಳಿಗೆ ನೀಡಿರುವ ಹಣವೆಷ್ಟು?

ಶಿರಾ ತಾಲುಕಿನ ಪಟ್ಟನಾಯಕನ ಹಳ್ಳಿಯಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ರೂ.12.40 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಶಿರಾ ಕೋಟೆ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸಲು ರೂ.25.00 ಲಕ್ಷಗಳನ್ನು ರಾಜ್ಯ ಪುರಾತತ್ವ ಇಲಾಖೆಗೆ ಬಿಡುಗಡೆ ಮಾಡಲಾಗುತ್ತಿದೆ.

87 ಶ್ರೀ ಜಯಚಂದ್ರ ಟಿ.ಬಿ.(ಸಿರಾ)

ಡಾ:ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು)

ಅ) ಮರಳು ಸಾಗಾಣಿಕೆಗಾಗಿ ತಾತ್ಕಾಲಿಕ ಪರವಾನಗಿ ನೀಡುವ ಪದ್ಧತಿ ಜಾರಿಯಲ್ಲಿದ್ದು, ಪರ್ಮಿಟ್ ನಿಡುವಲ್ಲಿ ದುರುಪಯೋಗಪಡಿಸಿಕೊಂಡು ಇತಿಹಾಸ ಪ್ರಸಿದ್ಧ ತಲಕಾಡು, ಶಿರ, ಗೌರಿಬಿದನೂರು ಹಾಗೂ ಇನ್ನೂ ಅನೇಕ ಸ್ಥಳಗಳಲ್ಲಿ